**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ವರ್ಗ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ ಸಿ ನಂ. 721/2022**

ಪಿರ್ಯಾದುದಾರರು ಗುಂಡ್ಲುಪೇಟೆ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರು

1. ಪ್ರವೀಣ ಬಿನ್ ರಾಜು, 28 ವರ್ಷ,
2. ಮಾದೇಶ ಬಿನ್ ಶಿವಮಾದಯ್ಯ, 36 ವರ್ಷ,

   ಇಬ್ಬರ ವಾಸಃ ವೀರನಪುರ ಕಾಲೋನಿ,

   ಗುಂಡ್ಲುಪೇಟೆ ಟೌನ್.
3. ತೇಜ @ ತೇಜಸ್ ಬಿನ್ ನಂಜುಂಡಪ್ಪ, 34 ವರ್ಷ,

   ವಾಸಃ 15ನೇ ವಾರ್ಡ್, ಚಿಕ್ಕ ಮಾಂಸದ ಅಂಗಡಿ ಬೀದಿ,

   ಗುಂಡ್ಲುಪೇಟೆ ಟೌನ್.

ಆರೋಪಣೆ

ಶ್ರೀ ಬಸವರಾಜ ತಳವಾರ. ಬಿಎ., ಎಲ್ ಎಲ್ ಬಿ., ಹಿರಿಯ ಸಿವಿಲ್ ನ್ಯಾಯಾಧೀಶ ಮತ್ತು ಪ್ರ ದ ನ್ಯಾ ದಂ ಗಳು ಗುಂಡ್ಲುಪೇಟೆ ಆದ ನಾನು ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡ ಆಪಾದನೆಗಳಿಗೆ ಗುರಿಪಡಿಸುತ್ತೇನೆ.

ದಿನಾಂಕಃ 08.09.2022 ರಂದು ಸಂಜೆ 7.30 ಗಂಟೆಯ ಸಮಯದಲ್ಲಿ ಗುಂಡ್ಲುಪೇಟೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ವೀರನಪುರ ಕಾಲೋನಿಯಲ್ಲಿ ಆರೋಪಿಗಳಾದ ನೀವು ಪ್ರತಿಷ್ಠಾಪನೆ ಮಾಡಿದ್ದ ಗಣಪತಿ ವಿಸರ್ಜನಾ ಸಮಯದಲ್ಲಿ ಆರೋಪಿಗಳಾದ ನೀವು ಯಾವುದೇ ಪೂರ್ವಾನುಮತಿಯನ್ನು ಪಡೆಯದೇ ಸಾರ್ವಜನಿಕರಿಗೆ ತೊಂದರೆ ಉಂಟಾಗುವಂತೆ ಕರ್ಕಶವಾದ ರೀತಿಯಲ್ಲಿ ಡಿ.ಜೆ. ಯಂತಹ ಧ್ವನಿವರ್ಧಕ ಉಪಕರಣವನ್ನು ಉಪಯೋಗಿಸಿ ಶಬ್ದ ಮಾಲಿನ್ಯ ಉಂಟು ಮಡಿಡುತ್ತಿದ್ದು, ಆ ಮೂಲಕ ಕಲಂ 103, 106, 108, 109 ಕೆ.ಪಿ. ಆಕ್ಟ್ ರಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಮೇಲ್ಕಂಡ ಆಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುವುದಾಗಿ, ಈ ನಾಯಾಲಯದ ವಿಚಾಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸಲಾಗಿದೆ.

ದಿನಾಂಕಃ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ.
ಗುಂಡ್ಲುಪೇಟೆ